ಏಕತಾನತೆಯನ್ನು ಮುರಿಯಲೂ ಇದು ಸಹಾಯಕವಾಗುತ್ತದೆ. ಆದರೆ, ಒಬ್ಬ ಲೇಖಕನ ವಿಚಾರಗಳನ್ನು ದೀರ್ಘ ಕಾಲದಲ್ಲಿ, ಮತ್ತು ದೀರ್ಘ ಸಂಭಾಷಣೆಯಲ್ಲಿ ತೊಡಗಿಸಿರುವ ಪ್ರಯೋಗವನ್ನು ನಾವು ಸಾಮಾನ್ಯವಾಗಿ ಕಾಣುವುದಿಲ್ಲ. ಹೀಗಾಗಿ ಕಟ್ಟುವಿಕೆಯ ದೃಷ್ಟಿಯಿಂದಲೂ ಇದು ಮುಖ್ಯವಾದ ಪುಸ್ತಕ.

ಸರ್ಕಾರಗಳು, ಸರ್ಕಾರಗಳ ಭಾಷೆ ಮತ್ತು ಅವುಗಳ ಕೃತ್ಯಗಳನ್ನು ಚಾಮ್‌ಸ್ಕಿ ಹತ್ತಿರದಿಂದ ಪರೀಕ್ಷಿಸುತ್ತಾರೆ. ಸರ್ಕಾರಗಳು ತಮ್ಮ ಕಾರ್ಯ ಮತ್ತು ಕೃತ್ಯಗಳಿಗೆ ಉಪಯೋಗಿಸುವ ತರ್ಕವನ್ನು ಎರಡು ನೆಲೆಗಳಲ್ಲಿ ಅವರು ಪ್ರಶ್ನಿಸುತ್ತಾರೆ: ಮಾತಿಗೂ ಕೃತ್ಯಕ್ಕೂ ಇರುವ ಅಂತರ; ಸರಿ–ತಪ್ಪು ಎನ್ನುವ ನೈತಿಕ ನೆಲೆಯ ಅಂತರ. ಸರ್ಕಾರಗಳು ತಮ್ಮ ತಕ್ಷಣದ ಅನುಕೂಲಕ್ಕೆ ಮತ್ತು ತುರ್ತಿನ ರಾಜಕೀಯಕ್ಕೆ ಹೊಂದುವಂತೆ ಕೆಲಸ ಮಾಡುತ್ತ, ತಕ್ಕ ತರ್ಕವನ್ನು ಒದಗಿಸುತ್ತವೆ. ಆ ತರ್ಕದ ಮೂಲ ಇರುವುದು ಎಲ್ಲಿ? ಎನ್ನುವುದನ್ನು ಕೇಳಿದಾಗ ಆಂತರ್ಯದ ಪದರಗಳನ್ನು ಬಿಡಿಸಿನೋಡುವ ಅವಕಾಶ ಒದಗುತ್ತದೆ. ಸರ್ಕಾರಗಳು ಚುನಾಯಿತವಾಗುವ ಮಟ್ಟಕ್ಕೆ ಮಾತ್ರ ಪ್ರಜಾತಾಂತ್ರಿಕ ಪದ್ಧತಿಯನ್ನು ಪಾಲಿಸುತ್ತವಾಗಲೀ, ನಡಾವಳಿಯಲ್ಲಿ ಪ್ರಜಾತಾಂತ್ರಿಕವಾಗಿ– ಬಹುಜನ ಸುಖಾಯ ಬಹುಜನ ಹಿತಾಯ ಕೆಲಸಮಾಡುತ್ತವೆಯೇ ಎನ್ನುವ ಪ್ರಶ್ನೆಗೆ ಉತ್ತರ ಹೆಚ್ಚಿನಂಶ ನಕಾರಾತ್ಮಕವಾಗಿರುತ್ತದೆ. ನಿಜಕ್ಕೂ ಸರ್ಕಾರವನ್ನು ಕೆಲವೇ ಪಟ್ಟಭದ್ರ ಹಿತಾಸಕ್ತಿಗಳು, ಅದರಲ್ಲೂ ವ್ಯಾಪಾರಜಗತ್ತಿಗೆ ಸಂಬಂಧಿಸಿದ ಹಿತಾಸಕ್ತಿಗಳು ನಡೆಸುತ್ತಿವೆ. ಅದಕ್ಕೆ ತಕ್ಕಂತೆ ಮಾಧ್ಯಮಗಳೂ ರಾಷ್ಟ್ರಹಿತ ಎನ್ನುವ ವಾದದಡಿ ತಮ್ಮ ವಸ್ತುನಿಷ್ಠತೆಯನ್ನು ಕಳೆದುಕೊಳ್ಳುತ್ತವೆ ಎನ್ನುವುದನ್ನು ಚಾಮ್‌ಸ್ಕಿ ಮಂಡಿಸುತ್ತಾರೆ.

ಬಡವರು–ಶ್ರೀಮಂತರೆಂದು ನಾಗರಿಕರನ್ನು ಎರಡು ಸ್ಥೂಲ ವಿಭಾಗಗಳಲ್ಲಿ ನೋಡಿದಾಗ ಶ್ರೀಮಂತ ಉದ್ಯಮಿಗಳು ಸರ್ಕಾರಕ್ಕೆ ನಿಕಟವಾಗಿರುವುದರಿಂದ ಅವರುಗಳ ಮಾತು ಸರ್ಕಾರದ ಕಿವಿಗಳಿಗೆ ಬೀಳುತ್ತಿರುತ್ತದೆ. ಅದೇಕಾಲಕ್ಕೆ ಬಡವರ, ಮತ್ತು ಅಸಂಘಟಿತ ವ್ಯಕ್ತಿಗಳ ಮಾತು ಪ್ರಜಾತಂತ್ರಿಕ ವ್ಯವಸ್ಥೆಯಲ್ಲಿದ್ದರೂ ಸರ್ಕಾರಗಳ ನೀತಿರೂಪಕಲ್ಪನೆಯಲ್ಲಿ ತಕ್ಕ ಸ್ಥಾನವನ್ನು ಪಡೆಯುವುದಿಲ್ಲ. ಅದು ಪಡೆಯಬೇಕೆಂದರೆ ಅದಕ್ಕೆ ತಕ್ಕ ಭಾಷಾಪ್ರಯೋಗದ ಉಪಕರಣಗಳು ನಮ್ಮಲ್ಲಿಲ್ಲ.

ಉದಾಹರಣೆಗೆ, 'ಇನ್ಸೆಂಟಿವ್' ಎನ್ನುವ ಪದಪ್ರಯೋಗವನ್ನು ಪರಿಶೀಲಿಸಿ. ಸಾಮಾನ್ಯವಾಗಿ ಇದು ಹೊಸ ಉದ್ಯಮಗಳನ್ನು ದೇಶ, ರಾಜ್ಯ, ನಗರಕ್ಕೆ ಆಹ್ವಾನಿಸಲು ಉಪಯೋಗಿಸುವ ಪದ. ಉದ್ಯಮಿಗಳು ತಮ್ಮ ವ್ಯಾಪಾರ ವ್ಯವಸ್ಥೆಯನ್ನು ನಿರ್ಮಿಸಲು ನೀಡುವ ಪ್ರೋತ್ಸಾಹ. ಈ ಪ್ರೋತ್ಸಾಹ ಸುಲಭವಾಗಿ ಜಮೀನಿನ ಅಧಿಗ್ರಹಣ ಮಾಡಿ ಉದ್ಯಮಗಳನ್ನು ಸ್ಥಾಪಿಸುವುದಕ್ಕೆ ಅನುವು ಮಾಡಿಕೊಡುವುದಿರಬಹುದು, ತೆರಿಗೆಯ ರಿಯಾಯಿತಿಯಿರಬಹುದು, ಇಲ್ಲವೇ ಆ ವ್ಯಾಪಾರ ಲಾಭದಾಯಕವಾಗಲು ಕೊಡುವ ಯಾವುದೇ ಪ್ರೋತ್ಸಾಹಕ ನೀತಿಯಾಗಬಹುದು. ಬಡವರ ವಿಷಯಕ್ಕೆ ಬಂದಾಗ ಅದೇ ಸಬ್ಸಿಡಿಯಾಗುತ್ತದೆ, ನಮ್ಮ ಪ್ರಧಾನ ಮಂತ್ರಿಗಳ ಬಾಯಲ್ಲಿ ಅದು 'ಮುಫ್ತ್ ಕಾ ರೇವಡಿ'ಯೂ ಆಗುತ್ತದೆ. ಮತ್ತೊಂದು ಪದಪ್ರಯೋಗ, 'ರಿಫಾರ್ಮ್' ಅಥವಾ 'ಸುಧಾರಣೆ'. ಮಾರುಕಟ್ಟೆಗಳು ಸುಗಮವಾಗಿ ನಡೆಯಲು ಬೇಕಾದ ಕಾನೂನು ಮತ್ತು ನೀತಿಗತ ತಿದ್ದುಪಡಿಗಳು ಯಾವ ದಿಕ್ಕಿನಲ್ಲಿರಬೇಕು ಎನ್ನುವುದನ್ನು 'ಸುಧಾರಣೆ' ಸೂಚಿಸುತ್ತದೆ. ಕಾರ್ಮಿಕ ಪದ್ಧತಿಗಳ ಸುಧಾರಣೆಯಲ್ಲಿ 'ಹೈರ್ ಆಂಡ್ ಫೈರ್' (ಇಷ್ಟ ಬಂದಾಗ ನೌಕರಿಯಲ್ಲಿರಿಸಿಕೊಂಡು, ಬೇಡವಾದಾಗ ಮನೆಗೆ ಕಳುಹುವ ಪ್ರಕ್ರಿಯೆ) ಯನ್ನು ಸುಧಾರಣೆಯೆಂದು ಪರಿಭಾಷಿಸಲಾಗುತ್ತದೆ. ಅಮೆರಿಕದಲ್ಲಿದ್ದ ವಾರ್ ಡಿಪಾರ್ಟ್‌ಮೆಂಟ್ ಅನ್ನು (ಯುದ್ಧವಿಭಾಗ) ರಕ್ಷಣಾ ವಿಭಾಗ ಎಂದು ಕರೆದಾಗ ಅದಕ್ಕೊಂದು ಗೌರವ, ಹೆಮ್ಮೆ ಮತ್ತು ವಾದರಹಿತ ಒಪ್ಪಿಗೆ ಸಿಗುತ್ತದೆ. ಆದರೆ, ಎರಡೂ ವಿಭಾಗಗಳು ಮಾಡುವ ಕೆಲಸ ಒಂದೇ. ಅಫಘಾನಿಸ್ತಾನಕ್ಕೆ ಮೊದಲಿಗೆ ಸೋವಿಯತ್ ಸಂಘ ನಂತರ ಅಮೆರಿಕ

